ಶ್ರೀ ಆರ್. ಅಶೋಕ್ : ಮಾನ್ಯ ಸೋಮಣ್ಣನವರ ನೇತ್ರತ್ವದಲ್ಲೇ ಮಾನ್ಯ ದೇವೇಗೌಡರು ಆ ರ್ಯಾಲಿಯನ್ನು ಮಾಡಿದ್ದು.

ಶ್ರೀ ವಿ. ಸೋಮಣ್ಣ : ಅರ್ಧ ಗಂಟೆ ಚರ್ಚೆಗೆ ತಾವು ಅವಕಾಶ ಕೊಟ್ಟರೇ ಮಾನ್ಯ ಸಚಿವರೂ ಒಪ್ಪಿಕೊಳ್ಳುತ್ತಾರೆಂದು ಕಾಣುತ್ತದೆ. ಆದ್ದರಿಂದ ತಾವು ದಯಮಾಡಿ 6ನೇ ತಾರೀಖಿನ ಒಳಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಆಯಿತು.

ಶ್ರೀ ಎಂ.ಪಿ. ಪ್ರಕಾಶ್ : ಅವರು ನೋಟೀಸ್ ಕೊಟ್ಟರೆ ಅವಕಾಶ ಮಾಡಿಕೊಡಿ.

ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು) : ಮಾನ್ಯ ಅಧ್ಯಕ್ಷರೆ, ಇದು ಕೇವಲ ಬೆಂಗಳೂರು ನಗರಕ್ಕೆ ಸೀಮಿತವಾಗಿಲ್ಲ, ಇಡೀ ಕರ್ನಾಟಕದಲ್ಲಿ ಎಲ್ಲಾ ಪುರಸಭೆ ಮತ್ತು ನಗರಸಭೆಯ ವ್ಯಾಪ್ತಿಯಲ್ಲಿ ಇದೇ ರೀತಿಯ ಅಕ್ರಮ ಸಕ್ರಮ ಸೈಟುಗಳ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗಿ ವಿನಂತಿ. ಇದು ಕೇವಲ ಬೆಂಗಳೂರಿಗೆ ಸೀಮಿತವಾಗಿಲ್ಲ. ಇಡೀ ಕರ್ನಾಟಕಕ್ಕೆ ಸೀಮಿತವಾಗಿದೆ. ಎಲ್ಲಾ ನಗರಸಭೆಗಳಲ್ಲಿ ಪಟ್ಟಣಗಳಲ್ಲಿ ಈ ರೀತಿ ತ್ರಿಶಂಕು ರೀತಿಯಲ್ಲಿ ಜನರು ಶಾಪಗ್ರಸ್ಥರಾಗಿ ಜೀವನ ನಡೆಸುತ್ತಿದ್ದಾರೆ. ಆದ್ದರಿಂದ ದಯಮಾಡಿ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

(iv) ರಾಜ್ಯದ ಪರಿಸರ ಬೆಳೆಸಲು ಹಿನ್ನೆಡೆಯುಂಟಾಗಿರುವ ಬಗ್ಗೆ

ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಅಧ್ಯಕ್ಷರೆ, ವನಸಂವರ್ಧನ ಟ್ರಸ್ಟ್ ಎಂದು ಕಳೆದ ಸರ್ಕಾರ ಒಡಂಬಡಿಕೆಯನ್ನು ಮಾಡಿಕೊಂಡಿತ್ತು. ಈಗ ಮಳೆ ಎಲ್ಲಾ ಕಡೆ ಪ್ರಾರಂಭವಾಗಿದೆ, ಅರಣ್ಯ ಇಲಾಖೆಯವರು ಎಲ್ಲಾ ಕಡೆ ಗಿಡಗಳನ್ನು ನೆಡಬೇಕಾಗಿತ್ತು. ಎಲ್ಲಾ ಕಡೆ ಸಸಿಯನ್ನು ನೆಟ್ಟು ಸಸ್ಯಸಂರಕ್ಷಣೆ ಮಾಡುವ ಕೆಲಸವನ್ನು ಮಾಡಬೇಕಾಗಿತ್ತು. ವಿಚಿತ್ರವೆಂದರೆ, ಒಂದು ಸರ್ಕಾರ ಬದಲಾದ ತಕ್ಷಣವೇ ಏನಾಯಿತು ಎಂಬುದನ್ನು ಹೇಳುತ್ತೇನೆ. ಕಳೆದ ಬಾರಿ ಏನು ವನಸಂವರ್ಧನ ಟ್ರಸ್ಟ್ ಎಂದು ಮಾಡಿ ಅದರ ಮೂಲಕ ರೈತರಿಗೆ ಬೇರೆ ಬೇರೆ ಸಂಘ ಸಂಸ್ಥೆಗಳಿಗೆ ಟ್ರಸ್ಟ್‌ಗಳಿಗೆ ಉಚಿತವಾಗಿ ಸಸಿಗಳನ್ನು ಕೊಡುವ ಬಗ್ಗೆ ಸರ್ಕಾರ ಒಡಂಬಡಿಕೆಯನ್ನು ಮಾಡಿಕೊಂಡಿತ್ತು. ಕರ್ನಾಟಕ ರಾಜ್ಯದ ಜನತೆಯಲ್ಲಿ ಪರಿಸರ ಪ್ರಜ್ಞೆಯನ್ನು ಜಾಗ್ರತೆಯನ್ನು ಮೂಡಿಸಿ ಮರಗಳನ್ನು ಬೆಳೆಸಿ ಜೈವಿಕ ಸಂಪನ್ಮೂಲಗಳನ್ನು ಉತ್ತಮಪಡಿಸಿ ಪರಿಸರವನ್ನು ಅಭಿವೃದ್ಧಿಪಡಿಸುವುದು ಕರ್ನಾಟಕ ವನಸಂವರ್ಧನ ಟ್ರಸ್ಟ್ (ರಿ) ಇದರ ಆದ್ಯ ಕರ್ತವ್ಯವಾಗಿದೆ. ಇದರ ಪ್ರಸ್ತಾವವನ್ನು ಕರ್ನಾಟಕ ಸರ್ಕಾರವು ಕೆಳಕಂಡ ಸಾಕ್ಷಿಗಳ ಸಮುಖದಲ್ಲಿ ಒಪ್ಪಿರುತ್ತದೆ. ಅಂದರೆ ಕಾರ್ಯದರ್ಶಿ, ಸರ್ಕಾರಿ ಅಧಿಕಾರಿಗಳು, ವಿಶ್ವನಾಥ್, ಅಪರ ಮುಖ್ಯಕಾರ್ಯದರ್ಶಿಯವರು ಸಹಿಯನ್ನು ಹಾಕಿ ಒಡಂಬಡಿಕೆಯನ್ನು ಮಾಡಿಕೊಂಡರು. ಐದು ಕೋಟಿ ಸಸಿಗಳನ್ನು ಈ ರಾಜ್ಯದಲ್ಲಿ ನೆಡಬೇಕು. ಆದಿಚುಂಚನಗಿರಿಯ ಮಠಾಧೀಶರಾದಂಥ ಮಾನ್ಯ ಬಾಲಗಂಗಾಧರ ಸ್ವಾಮಿಜಿಯವರು ಇದರ ಕಾರ್ಯದರ್ಶಿಯಾಗಿದ್ದರೆ, ಮಾನ್ಯ

ಯಲ್ಲಪ್ಪರೆಡ್ಡಿಯವರು ಇದಕ್ಕೆ ಸದಸ್ಯರಾಗಿದ್ದಾರೆ. ಕಳೆದ ಸರ್ಕಾರ ಒಂದು ಒಡಂಬಡಿಕೆಯನ್ನು ಮಾಡಿಕೊಂಡಿತು. ಐದು ಕೋಟಿ ಸಸಿಗಳನ್ನು ನಾವು ಉಚಿತವಾಗಿ ಕೊಡುತ್ತೇವೆ. ಅದನ್ನು ನೀವು ಗೊಬ್ಬರ ಹಾಕಿ ನೆಟ್ಟು ಬೆಳೆಸಬೇಕು ಎಂದು. ಅದಕ್ಕೋಸ್ಕರ ಆ ವನಸಂವರ್ಧನ ಟ್ರಸ್ಟ್‌ನವರು ನಲವತ್ತು ಐವತ್ತು ಟ್ರಾಕ್ಟರ್‌ಗಳನ್ನು ತೆಗೆದುಕೊಂಡು ಇಡೀ ಕರ್ನಾಟಕದ ಎಲ್ಲಾ ಸ್ವಾಮೀಜಿಗಳನ್ನು, ಎಲ್ಲಾ ಮಠಾಧೀಶರನ್ನು, ಅದು ಹಿಂದೂ ಇರಬಹುದು, ಮುಸ್ಲಿಂ ಇರಬಹುದು, ಎಂ.ಪಿ. ಎಂ.ಎಲ್.ಎ. ಜಿಲ್ಲಾಪಂಚಾಯಿತಿಯ ಸದಸ್ಯರನ್ನು ಎಲ್ಲರನ್ನೂ ಒಳಗೊಂಡು ಇದೊಂದು ರಾಜ್ಯ ವ್ಯಾಪ್ತಿ ಪರಿಸರ ಸಂರಕ್ಷಣೆ ಮಾಡಬೇಕೆಂದು ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳಲಾಯಿತು. ಅದೇನಾಯಿತೋ ಗೊತ್ತಿಲ್ಲ, ಸರ್ಕಾರ ಬದಲಾವಣೆಯಾದ ತಕ್ಷಣ ಒಂದು ಪತ್ರವನ್ನು ಕಳಿಸಿದ್ದಾರೆ. ನಾವು ಉಚಿತವಾಗಿ ಸಸಿಗಳನ್ನು ಕೊಡಲು ಆಗುವುದಿಲ್ಲ, ಏಕೆಂದರೆ ನಾವು ಪ್ರೈವೇಟ್ ನರ್ಸರಿಗಳೇನಿವೆ ಅವುಗಳನ್ನು ರಕ್ಷಣೆ ಮಾಡಬೇಕಾಗಿದೆ. ಅವರ ಹಿತಾಸಕ್ತಿಗಳನ್ನು ರಕ್ಷಣೆ ಮಾಡಬೇಕಾಗಿದೆ. ಅದಕ್ಕಾಗಿ ನಾವು ಉಚಿತವಾಗಿ ಸಸಿಗಳನ್ನು ಕೊಡಲು ಆಗುವುದಿಲ್ಲ. ಆದ್ದರಿಂದ ನಾವು ಇದನ್ನು ನಿಲ್ಲಿಸುತ್ತೇವೆ. ತಾವು ಯೋಚನೆ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ. ಮಾನ್ಯ ಮುಖ್ಯಮಂತ್ರಿಯವರಲ್ಲಿ ಒಂದೇ ಒಂದು ವಿನಂತಿ, ಮಾನ್ಯ ಅಶೋಕ್‌ರವರು ಪ್ರಸ್ತಾಪ ಮಾಡುತ್ತಿರುವಂಥದ್ದು ಹಿಂದಿನ ಸರ್ಕಾರ ಇದ್ದ ಸಂದರ್ಭದಲ್ಲಿ ಆದಿಚುಂಚನಗಿರಿ ಸ್ವಾಮಿಯವರು ವಿಶೇಷ ಆಸಕ್ತಿ ತೆಗೆದುಕೊಂಡು ಎಲ್ಲಾ ಸ್ವಾಮಿಯವರನ್ನು ಒಗ್ಗೂಡಿಸಿ ಇಡೀ ರಾಜ್ಯದಲ್ಲಿ ಸಸಿಗಳನ್ನು ರಸ್ತೆಯಲ್ಲಿ ನೆಡುವಂಥ ಕೆಲಸವನ್ನು ಪ್ರಾರಂಭ ಮಾಡಿದರು, ಆಗ ಉಚಿತವಾಗಿ ಸಸಿಗಳನ್ನು ಕೊಡುತ್ತಿದ್ದರು. ಸರ್ಕಾರ ಮಾಡಬೇಕಾಂಥ ಕೆಲಸವನ್ನು ಇವತ್ತು ಆದಿಚುಂಚನಗಿರಿ ಸ್ವಾಮಿಯವರು ರಾಜ್ಯದ ಎಲ್ಲಾ ಸ್ವಾಮಿಜಿಯವರು ಒಂದಾಗಿ ಆ ಕೆಲಸವನ್ನು ಮಾಡುತ್ತಿರುವಂಥ ಕಾಲದಲ್ಲಿ ಈಗ ಆ ಸಸಿಗಳನ್ನು ದುಡ್ಡು ಕೊಟ್ಟು ಕೊಂಡುಕೊಳ್ಳಿ ಎಂದರೆ ಯಾರು ಮುಂದೆ ಬರುತ್ತಾರೆ? voluntary organizations ಗಳನ್ನೆಲ್ಲಾ ಅವರು ಇನ್‌ವಾಲ್ವ್ ಮಾಡಿ ಎಲ್ಲಾ ಶಾಸಕರನ್ನು ಸಹಕಾರ ಕೊಡಿ ಎಂದು ಕೇಳಿಕೊಂಡು ಅಷ್ಟೊಂದು ಒಳ್ಳೆಯ ಕಾರ್ಯಕ್ರಮವನ್ನು ಮಾಡುತ್ತಿಬೇಕಾದರೆ ಈಗ ಅದಕ್ಕೆ ಬೇಕಾದ ವೆಚ್ಚವನ್ನು ಸರ್ಕಾರ ಭರಿಸಿ ಉಚಿತವಾಗಿ ಕೊಡುತ್ತಿರತಕ್ಕದನ್ನು ಈಗ ಏಕೆ ಬದಲಾವಣೆ ಮಾಡಿ ದುಡ್ಡು ಕೊಟ್ಟು ತೆಗೆದುಕೊಳ್ಳಿ ಎಂದರೆ ಅವರಿಗೇನು ಆಸಕ್ತಿ? ಅವರೇಕೆ ಆ ಕೆಲಸವನ್ನು ಮಾಡಲು ಹೋಗುತ್ತಾರೆ? ಯಾರೋ ಒಬ್ಬ ಸ್ವಾಮಿಜಿ ಮುಂದೆ ಬಂದು ಸರ್ಕಾರ ಮಾಡತಕ್ಕ ಕೆಲಸವನ್ನು ಅವರೇ ಮಾಡಲು ಬಂದರೆ ಅದಕ್ಕೆ ಸಹಕಾರ ಕೊಡಬೇಕಾದ್ದು ಸರ್ಕಾರದ ಜವಾಬ್ದಾರಿಯಾಗುತ್ತದೆ. ಈಗ ಆ ಗಿಡಗಳಿಗೆ ದುಡ್ಡನ್ನು ಕೊಡಿ ಎನ್ನುವುದಾದರೆ ಬೇರೆ ಯಾವ ರೀತಿ ಆ ದುಡ್ಡನ್ನು ಅವರಿಗೆ ಖರ್ಚು ವೆಚ್ಚ ಭರಿಸಲು ಮಾಡಿ ಅವರಿಗೆ ಉಚಿತವಾಗಿ ಕೊಡುವುದನ್ನು ಮಾಡಿ, ಇನ್ನೂ ಹತ್ತು ಪಟ್ಟು ಹೆಚ್ಚು ಕೊಡುತ್ತೇವೆ ಹೆಚ್ಚು ಗಿಡಗಳನ್ನು ಆದಷ್ಟು ಬೇಗ ನೆಟ್ಟು

ಒಂದಷ್ಟು ಒಳ್ಳೆಯ ವಾತಾವರಣ ನಿರ್ಮಾಣ ಮಾಡಿ ಎಂಬ ಬಗ್ಗೆ ಪ್ರಯತ್ನ ಮಾಡದೆಯೇ ಅದಕ್ಕೆ ಚಾರ್ಜ್ ಮಾಡುತ್ತೇವೆಂದರೆ ಅದು ಎಷ್ಟರಮಟ್ಟಿಗೆ ಧರ್ಮ? ಅದಕ್ಕೆ ತಾವು ಸ್ವಲ್ಪ ಗಮನ ಕೊಟ್ಟರೆ ಈ ಸಮಸ್ಯೆಗೆ ಪರಿಹಾರ ಸಿಗಬಹುದು ಎಂದು ತಮ್ಮ ಗಮನಕ್ಕೆ ತರಲು ಪ್ರಯತ್ನ ಮಾಡುತ್ತಿದ್ದೇನೆ. ಮತ್ತೆ ಬೇರೆ ಏನೂ ಇಲ್ಲ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರಾದ ಮಾನ್ಯ ಅಶೋಕ್‌ರವರೇನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲು ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ನಾನೂ ಅವರ ಜೊತೆಯಲ್ಲಿ ಹೋಗಿದ್ದೆ, ಅದು ಸಸ್ಯ ನೆಡತಕ್ಕಂಥ ಒಂದು ಬೃಹತ್ ಕಾರ್ಯಕ್ರಮ, ಆದಿಚುಂಚನಗಿರಿ ಸ್ವಾಮಿಯವರು ಆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರು. ಅದಕ್ಕೆ ಆದಷ್ಟು ಸಸಿ ನೆಡತಕ್ಕ ಕೆಲಸವನ್ನು ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಅವರು ಪ್ರಾರಂಭ ಮಾಡಿದ್ದಾರೆ. ನನಗೆ ಕೂಡ ಅವರು ಫೋನಿನ ಮೂಲಕ ಹೇಳಿದ್ದಾರೆ. ಇವತ್ತು ದುಡ್ಡು ಕೊಡತಕ್ಕದ್ದು ಇಲ್ಲ, ಅವರಿಗೆ ಉಚಿತವಾಗಿ ಸಸಿಗಳನ್ನು ಕೊಡುವ ವ್ಯವಸ್ಥೆಯನ್ನು ನಾವು ಮಾಡಿಕೊಡುತ್ತೇವೆ.

ಶ್ರೀ ಆರ್. ಅಶೋಕ್ : ಧನ್ಯವಾದಗಳು, ಬಹಳ ಒಳ್ಳೆಯದಾಯಿತು.

(v) ನಿಯಮ 351ರ ಅಡಿಯಲ್ಲಿ ನೀಡಿರುವ ಸರ್ಕಾರದ ಉತ್ತರವು ಸಮಂಜಸವಲ್ಲ ಎಂಬುದರ ಬಗ್ಗೆ

† **ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್)** : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ನಾನೊಂದು ವಿಷಯವನ್ನು ಕೊಟ್ಟಿದ್ದೆ. ಅದರಲ್ಲಿ ಒಂದೇ ಕುಟುಂಬದ ನಾಲ್ಕು ಜನರನ್ನು encounter ಮಾಡಿದ್ದಾರೆ. ಅದರ ಬಗ್ಗೆ ಸರ್ಕಾರದ ಪರವಾಗಿ ಮಾನ್ಯ ಪ್ರಕಾಶ್‌ರವರ ತಾವು ಉತ್ತರ ಕೊಡುವುದಾಗಿದ್ದರೆ you must listen a lot. ಏನೆಂದರೆ ಅವರು ಅಧಿಕಾರಿಗಳಿಂದ ಏನು ಪಡೆಯುತ್ತಾರೋ ಅದನ್ನು ಇಲ್ಲಿ ಓದಿಬಿಟ್ಟು ಮಾಹಿತಿ ಕೊಟ್ಟಿದ್ದೇನೆಂದು ಹೇಳಬಾರದು. ಒಂದೇ ಕುಟುಂಬದ ನಾಲ್ಕು ಜನರನ್ನು encounter ಮಾಡಿದ್ದಾರೆ, ಅದಕ್ಕೆ ಕಾರಣವೇನೆಂದರೆ, ನಾಲ್ಕು ಜನರೂ ಕೇಡಿಗಳು, ರೌಡಿಗಳು, ಸುಮ್ಮನೆ ಇರುವವರನ್ನು ಹೋಗಿ ಶೂಟ್ ಮಾಡಲು ಆಗುತ್ತದೆಯೇ? ಈ ರೀತಿ ಗಲಾಟೆ ಮಾಡಿದ್ದಾರೆ. ಕೊಲೆ ಮಾಡಿದ್ದಾರೆ ಹಾಗೆ ಮಾಡಿದ್ದರೆ ಹೀಗೆ ಮಾಡಿದ್ದಾರೆ public place ನಲ್ಲಿ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಇದು ಶೂನ್ಯವೇಳೆ ಹೇಗಾಗುತ್ತದೆ? ಮಾನ್ಯ ರಾಜೇಂದ್ರನ್‌ರವರು ಶೂನ್ಯವೇಳೆ ಪಟ್ಟಿ 6 ರಲ್ಲಿ 351ರ ಅಡಿಯಲ್ಲಿ ನೀಡಿರುವ ಉತ್ತರವು ಸಮಂಜಸವಲ್ಲ ಎಂದು ಕೊಟ್ಟಿದ್ದಾರೆ. ಆದರೆ ಅವರು 9ನೆಯದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ನನಗೆ 9ನೆಯದ್ದರ ಪ್ರಸ್ತಾಪ ಎಂದರೆ ಅದರ ಫೈಲ್‌ನ್ನು ಇಟ್ಟುಕೊಂಡು ಕೂರುತ್ತೇವೆ, ಇಲ್ಲ 6ನೆಯದನ್ನು ಪ್ರಸ್ತಾಪ ಮಾಡುತ್ತೇವೆ